# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(2)/ಪಿಆರ್/252/2016-17

ಆಯುಕ್ತರವರ ಕಛೇರಿ,
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 31/3/17

## ಕಛೇರಿ ಆದೇಶ

ವಿಷಯ: ಡಾ|| ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಪೌರ ಕಾರ್ಮಿಕರ ದಿನಾಚರಣೆಯನ್ನಾಗಿ ಆಚರಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಆಯುಕ್ತರವರ ಆದೇಶ ದಿನಾಂಕ: 30-03-2017.

* * * *

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪ್ರತಿ ವರ್ಷದಂತೆ ಡಾ|| ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಪೌರಕಾರ್ಮಿಕರ ದಿನಾಚರಣೆಯನ್ನಾಗಿ ಆಚರಿಸುವ ಸಂಬಂಧ, ಪೌರಕಾರ್ಮಿಕರು, ಗ್ಯಾಂಗ್‌ಮೆನ್, ತೋಟಗಾರಿಕೆ ಮಾಲಿ, ತೋಟಗಾರಿಕೆ ಮೇಸ್ತ್ರಿ, ಎ.ಎಲ್.ಓ/ಎಂ.ಸಿ/ಸೈನೋಗ್ಯಾಸ್/ ಡಿಸ್ಇನ್‌ಫೆಕ್ಷನ್ ಗ್ಯಾಂಗ್‌ಮೆನ್, ಸ್ಯಾನಿಟರಿ ದಫೇದಾರ್‌ಗಳು ಹಾಗೂ ಜವಾನರುಗಳು ಮತ್ತು ಟಪಾಲು ರವಾನೆಗಾಗರರು, ಹೊಸ ವಲಯಗಳಾದ ಬೊಮ್ಮನಹಳ್ಳಿ, ಮಹದೇವಪುರ, ರಾ.ರಾ.ನಗರ, ದಾಸರಹಳ್ಳಿ ಮತ್ತು ಬ್ಯಾಟರಾಯನಪುರ ವಲಯಗಳಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ಹಾಗೂ ಕನಿಷ್ಠ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು, 'ಡಿ' ಗ್ರೂಪ್‌ಗೆ ಸಂಬಂಧ ಪಡುವ ವಾಟರ್‌ಮೆನಗಳು, ಅಟೆಂಡರ್, ಜವಾನರು, ಟಪಾಲು ರವಾನೆಗಾರರಿಗೆ ('ಡಿ' ಗ್ರೂಪಿಗೆ ಸಂಬಂಧ ಪಡುವ ಎಲ್ಲಾ ನೌಕರರುಗಳಿಗೆ) ರೂ. 19,000/-ಗಳನ್ನು ಅವರವರ ಬ್ಯಾಂಕಿನ ಖಾತೆಗೆ ಡಾ|| ಬಿ.ಆರ್. ಅಂಬೇಡ್ಕರ್ ದಿನಾಚರಣೆ ಪ್ರಯುಕ್ತ ತಪ್ಪದೇ ಪಾವತಿ ಮಾಡಲು ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಆದೇಶಿಸಲಾಗಿದೆ.

ಹಾಗೂ ಪ್ರತಿ ವರ್ಷದಂತೆ ಈ ವರ್ಷವೂ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸುವ ಪೌರಕಾರ್ಮಿಕರ, ಗ್ಯಾಂಗ್ ಮೆನ್ ತೋಟಗಾರಿಕೆ ಮಾಲಿ, ತೋಟಗಾರಿಕೆ ಮೇಸ್ತ್ರಿ, ಎ.ಎಲ್.ಓ/ಎಂ.ಸಿ/ಸೈನೋಗ್ಯಾಸ್/ಸ್ಪೆಷಲ್ ಗ್ಯಾಂಗ್ ಮೆನ್ ಎಂ.ಸಿ / ಡಿಸ್ಇನ್‌ಫೆಕ್ಷನ್ ಗ್ಯಾಂಗ್ ಮೆನ್ ಮತ್ತು ಸ್ಯಾನಿಟರಿ ಧಫೇದಾರ್ ರವರುಗಳ ಇಬ್ಬರು ಮಕ್ಕಳಿಗೆ ಮಾತ್ರ ಟೀಷರ್ಟ್, ಟೋಪಿ ಖರೀದಿಯ ವೆಚ್ಚ ರೂ. 2,500/-ಗಳನ್ನು ನೌಕರರ ಖಾತೆಗೆ ಪಾವತಿಸಲು ಆದೇಶಿಸಿದೆ.

ಮಾನ್ಯ ಆಯುಕ್ತರು ರವರ ಆದೇಶದ ಮೇರೆಗೆ)

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

31/3/17

ಪ್ರತಿಯನ್ನು : ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.

: ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸಿದೆ.

: ಮಾನ್ಯ ಆಯುಕ್ತರು / ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.

: ಅಪರ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.

: ಜಂಟಿ ಆಯುಕ್ತರು (ಆರೋಗ್ಯ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.

: ಎಲ್ಲಾ ವಲಯ ಅಪರ / ಜಂಟಿ ಆಯುಕ್ತರು ರವರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

: ಮುಖ್ಯ ಅಭಿಯಂತರರು / ಆರೋಗ್ಯಾಧಿಕಾರಿ / ತೋಟಗಾರಿಕೆ ಅಧೀಕ್ಷಕರು (ದಕ್ಷಿಣ) / (ಪೂರ್ವ) / ಪಶ್ಚಿಮ/ ಮಹದೇವಪುರ / ದಾಸರಹಳ್ಳಿ / ಯಲಹಂಕ / ರಾ.ರಾ.ನಗರ / ಬೊಮ್ಮನಹಳ್ಳಿ ರವರಿಗೆ ಕಳುಹಿಸಿದೆ.

: ಕೌನ್ಸಿಲ್ ಕಾರ್ಯದರ್ಶಿ, ರವರಿಗೆ ಕಳುಹಿಸುತ್ತಾ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು, ಜೆ.ಡಿ.(ಎಸ್) ಪಕ್ಷದ ನಾಯಕರು ಹಾಗೂ ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರು ರವರ ಅವಗಾಹನೆಗೆ ತರಲು ಕಳುಹಿಸಿದೆ.

: ಸಂಬಂಧಪಟ್ಟ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

: ಮುಲೆಅ / ಮುಲೆಪ / ಎಲ್ಲಾ ಸಹಾಯಕ ನಿಯಂತ್ರಕರು (ಹಣಕಾಸು) ರವರಿಗೆ ಕಳುಹಿಸಿದೆ.

: ಸಾರ್ವಜನಿಕ ಸಂಪರ್ಕಾಧಿಕಾರಿ ರವರಿಗೆ ಕಳುಹಿಸಿದೆ.

: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೌರಕಾರ್ಮಿಕರ ಮತ್ತು ಆರೋಗ್ಯ ಗ್ಯಾಂಗ್‌ಮೆನ್ ಸಂಘ (ರಿ) ರವರಿಗೆ ಕಳುಹಿಸಿದೆ. : ಕಛೇರಿ ಕಡತಕ್ಕೆ